# ಶಿವಮಹಿಮ್ನಸ್ತೋತ್ರಮ್

ಸ್ವಾಮಿ ಕರುಣಾಕರಾನಂದ

## ಸ್ತೋತ್ರದ ಮಹಿಮೆ

**ಕ**ಷ್ಟಪರಿಹಾರ ಮತ್ತು ಆರ್ಥಿಕ ಲಾಭಗಳಿಗಾಗಿ ಲೌಕಿಕನು ಭಗವಂತನನ್ನು ಪ್ರಾರ್ಥಿಸುತ್ತಾನೆ. ಭಗವದ್ಭಕ್ತನು ಭಗವಂತನಿಂದ ಪ್ರತ್ಯೇಕಗೊಂಡಿರುವ ವಿರಹವನ್ನೂ, ಭಗವಂತನಲ್ಲಿ ಐಕ್ಯಗೊಂಡ ಮನಸ್ಸುಳ್ಳವನು ಅದರಿಂದ ಉಂಟಾದ ಆನಂದವನ್ನೂ ಹಾಡುಗಳ ಮೂಲಕ ವ್ಯಕ್ತಗೊಳಿಸುತ್ತಾನೆ. ಇವೆಲ್ಲವೂ ಸ್ತೋತ್ರಗಳೇ. ಇವುಗಳನ್ನು, ಪಾಂಡಿತ್ಯಪೂರ್ಣವಾಗಿ ರಚಿಸಲ್ಪಟ್ಟವು ಹಾಗೂ ಸ್ಫೂರ್ತಿಯಿಂದ ಹೊರಹೊಮ್ಮಿದವೆಂದು ಎರಡು ವಿಧವಾಗಿ ವಿಂಗಡಿಸಬಹುದು. ಸ್ಫೂರ್ತಿಯಿಂದ ಹುಟ್ಟಿದ ಸ್ತೋತ್ರಗಳು, ಸಾಮಾನ್ಯ ಬುದ್ಧಿಯ ಸೀಮಿತ ಅಹಂಕಾರದ ಸ್ಪರ್ಶವಿಲ್ಲದಿರುವುದರಿಂದ, ಸಹಜವಾಗಿಯೆ ಸುಂದರವೂ, ಅಮೋಘವೂ ಆಗಿರುತ್ತವೆ. ತನ್ನ ಉಪಯೋಗಕ್ಕಾಗಿ ಬಾವಿಯನ್ನು ತೋಡಿದ ನಂತರ ಸಾಧನ–ಸಲಕರಣೆಗಳನ್ನು ಇತರರಿಗಾಗಿ ಬಿಟ್ಟು ಹೋಗುವಂತೆ, ಇಂತಹ ಸ್ತೋತ್ರಗಳ ರಚನಕಾರರು ಅವನ್ನು ಲೋಕದ ನೊಂದ ಜನಕ್ಕೆ ಬಿಟ್ಟು ಹೋಗಿರುತ್ತಾರೆ. ನಂತರದ ಕಾಲದಲ್ಲಿ ಅವುಗಳನ್ನು ವಿಧಿಪೂರ್ವಕವಾಗಿ ಉಪಯೋಗಿಸಿ ಅನೇಕ ಉಪಾಸಕರು ತಮ್ಮ ಜೀವನದಲ್ಲಿ ಫಲವನ್ನು ಕಂಡುಕೊಂಡಿದ್ದಾರೆ; ತಮ್ಮ ಆರ್ತ ಸ್ಥಿತಿಯನ್ನು ಗೋವಿನ ಹೆಜ್ಜೆಯಿಂದ ಉಂಟಾದ ಹಳ್ಳವನ್ನು ದಾಟುವಂತೆ ಸುಲಭವಾಗಿ ಕಳೆದುಕೊಂಡಿದ್ದಾರೆ. ಅಂತಹವುಗಳಲ್ಲಿ ಶಿವಮಹಿಮ್ನ ಸ್ತೋತ್ರವು ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವ ಸ್ತೋತ್ರವಾಗಿದೆ.

## ಹಿನ್ನೆಲೆ

ಈ ಸ್ತೋತ್ರದ ಉತ್ಪತ್ತಿಗೆ ಕಾರಣವಾದ ಸುಂದರವಾದ ದಂತಕಥೆಯೊಂದಿದೆ. ಇದನ್ನು ಸಂಕ್ಷಿಪ್ತವಾಗಿ ಈ ಸ್ತೋತ್ರದ ೩೭ ನೆಯ ಪದ್ಯದಲ್ಲಿ ನಿರೂಪಿಸಲಾಗಿದೆ. ಚಿತ್ರರಥನೆಂಬ ರಾಜನೊಬ್ಬನು ಅತ್ಯಂತ ಸುಂದರವಾದ ಪುಷ್ಪಗಳಿಂದ ಶೋಭಿಸುತ್ತಿದ್ದ ಹೂತೋಟವೊಂದನ್ನು ನಿರ್ಮಿಸಿದ್ದನು. ಅವನ ತೋಟದ ಹೂವುಗಳು ಪರಶಿವನ ಪೂಜೆಗೆ ಉಪಯೋಗಿಸಲ್ಪಡುತ್ತಿದ್ದವು. ದೇವಲೋಕದ ಪುಷ್ಪದಂತನೆಂಬ ಹೆಸರಿನ ಗಂಧರ್ವನು ಒಮ್ಮೆ ಭೂಮಿಯ ಮೇಲೆ ಸಂಚರಿಸುತ್ತ ಸುಂದರವಾದ ಈ ತೋಟವನ್ನು ನೋಡಿ ಮುಗ್ಧನಾದನು. ಅಂದಿನಿಂದ ಪ್ರತಿದಿನವೂ ಆತ ತೋಟದಲ್ಲಿದ್ದ ಎಲ್ಲ ಹೂವುಗಳನ್ನು ಕದ್ದುಕೊಂಡು ಹೋಗಲಾರಂಭಿಸಿದನು. ಹೀಗಾಗಿ ರಾಜನ ಶಿವಪೂಜೆಗೆ ಹೂವುಗಳೇ ಇಲ್ಲವಾದುವು. ಚಿಂತೆಗೀಡಾದ ರಾಜನು ಕಳ್ಳನನ್ನು ಹಿಡಿದು ಶಿಕ್ಷಿಸಲು ಸೈನಿಕರಿಗೆ ಆಜ್ಞೆ ಮಾಡಿದನು. ಗಂಧರ್ವರಿಗೆ ಅದೃಶ್ಯರಾಗುವ ಶಕ್ತಿಯಿದ್ದುದರಿಂದ ಪುಷ್ಪದಂತನು ಸಿಕ್ಕಿ ಬೀಳಲೇ ಇಲ್ಲ. ದೀರ್ಘ ಚಿಂತನೆಯ ನಂತರ ಚಿತ್ರರಥನು ತೋಟದೆಲ್ಲೆಡೆ ಶಿವನ ಪೂಜೆಗೆ ಉಪಯೋಗಿಸಿದ್ದ ಬಿಲ್ವ ಪುಷ್ಪಗಳೇ ಮೊದಲಾದ ನೈರ್ಮಾಲ್ಯವನ್ನು ಹರಡಿಸಿದನು. ರಾತ್ರಿಯಲ್ಲಿ ಆ ತೋಟಕ್ಕೆ ಬಂದ ಪುಷ್ಪದಂತನು ನೈರ್ಮಾಲ್ಯವನ್ನು ತುಳಿದೊಡನೆ ಶಿವನ ಕೋಪಕ್ಕೆ ಗುರಿಯಾಗಿ, ತನ್ನ ಅದೃಶ್ಯವಾಗುವ ಶಕ್ತಿಯನ್ನೇ ಕಳೆದುಕೊಂಡನು. ಪಶ್ಚಾತ್ತಾಪದಿಂದ ಅತ್ಯಂತ ದುಃಖಿತನಾದ ಅವನ ಹೃದಯದಿಂದ, ಶಿವನ ಕುರಿತಾಗಿ ಹೊರಬಂದ ಭಾವಗೀತೆಯೇ 'ಶಿವಮಹಿಮ್ನಸ್ತೋತ್ರಮ್'. ಈ ಸ್ತೋತ್ರದಿಂದ ಪ್ರಸನ್ನನಾದ ಆಶುತೋಷನಾದ ಶಿವನು ಆ ಗಂಧರ್ವನ ಶಕ್ತಿಯು ಮರಳುವಂತೆ ಅನುಗ್ರಹಿಸಿದನು.

ಈ ಸ್ತೋತ್ರಕ್ಕೆ ಇರುವ ವ್ಯಾಖ್ಯಾನಗಳಲ್ಲೆಲ್ಲ ೧೬ ನೆಯ ಶತಮಾನದ 'ಮಧುಸೂದನೀ ವ್ಯಾಖ್ಯೆ' ಯಷ್ಟು ಪ್ರಸಿದ್ಧವೂ, ವಿಸ್ತೃತವೂ ಆದ ಇನ್ನೊಂದು ವ್ಯಾಖ್ಯೆ ಇಲ್ಲವೆಂದೇ ಹೇಳಬೇಕು. ಏಕೆಂದರೆ, ಸಾಮಾನ್ಯವಾಗಿ ಮೇಲ್ನೋಟಕ್ಕೆ ಶಿವನ ಮಹಿಮೆಯನ್ನು ಹೇಳುವ ಈ ಸ್ತೋತ್ರವು ವಿಷ್ಣುವಿನ ಮಹಿಮೆಯನ್ನೂ ಅದೇ ಸಾಲುಗಳಲ್ಲಿ ಹೇಳಿದೆ ಎಂದು ಮಧುಸೂದನರು ಸೊಗಸಾಗಿ ಪ್ರತಿಪಾದಿಸಿ, ಶಿವಭಕ್ತರಿಗೂ ವಿಷ್ಣುಭಕ್ತರಿಗೂ ಇರುವ ವಿರಸವನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅದನ್ನು ಅವರೇ ಆ ಭಾಷ್ಯದ ಕೊನೆಯಲ್ಲಿ ಹೇಳುತ್ತಾರೆ:

ಹರಿಶಂಕರಯೋರಭೇದಬೋಧೋ
ಭವತು ಕ್ಷುದ್ರಧಿಯಾಮಪೀತಿ ಯತ್ನಾತ್।
ಉಭಯಾರ್ಥತಯಾ ಮಯೇದಮುಕ್ತಂ
ಸುಧಿಯಃ ಸಾಧುತಯೈವ ಶೋಧಯಂತು॥

'ಸಣ್ಣಬುದ್ಧಿಯುಳ್ಳವರಲ್ಲಿ ಹರಿ–ಹರರು ಒಂದೇ ಎಂಬುದನ್ನು ತಿಳಿಸುವುದಕ್ಕಾಗಿ ನಾನು ಎರಡು ರೀತಿಯಲ್ಲಿ ಈ ಸ್ತೋತ್ರವನ್ನು ವ್ಯಾಖ್ಯಾನಿಸಿದ್ದೇನೆ. ಬುದ್ಧಿವಂತರು ಈ ನನ್ನ ಪ್ರಯತ್ನವನ್ನು (ವಿಪರೀತವಾಗಿ ಪರಿಗಣಿಸದೆ) ಸರಿಯಾದ ರೀತಿಯಲ್ಲಿ ಸ್ವೀಕರಿಸಬೇಕು.'

## ಸ್ತೋತೃವಿನ ಮುಜುಗರ

ಸ್ತುತಿಸುವುದೆಂದರೆ ಗುಣಗಳನ್ನು ಎತ್ತಿಹೇಳುವುದು. ಹಾಗೆ ಹೇಳಬೇಕಾದರೆ ಅವುಗಳ ಸಂಪೂರ್ಣ ಜ್ಞಾನ ಅಗತ್ಯ. ಯಾವುದೊ ಶ್ರೀಮಂತ ವ್ಯಕ್ತಿ ಅಥವಾ ರಾಜನೊಬ್ಬನ ಇಲ್ಲದ ಗುಣಗಳನ್ನೊ ಅಥವಾ ಇರುವ ಗುಣಗಳನ್ನೆ ದೊಡ್ಡದಾಗಿ ಮಾಡಿ ಹೇಳುವುದನ್ನೋ ಸುಲಭವಾಗಿ ಮಾಡಬಹುದು. ಆದರೆ, ಇಲ್ಲಿ ಸ್ತುತಿಸಲ್ಪಡಬೇಕಾಗಿರುವ ವ್ಯಕ್ತಿ ಸ್ವಯಂ ಭಗವಂತ. ಅವನ ಗುಣಗಳು ಅನಂತವಾದ್ದರಿಂದ ತಿಳಿಯಲು ಅಶಕ್ಯವೇ. ಹೀಗಿದ್ದರೂ ಸ್ತೋತೃವಿಗೆ ಭಗವಂತನ ಗುಣಗಾನ ಮಾಡಲೇಬೇಕೆಂಬ ಸ್ಫೂರ್ತಿಯುಂಟಾಗಿದೆ. ಹೀಗಾಗಿ

ಪೂಜ್ಯ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು.

ಅತ್ಯಂತ ಮುಜುಗರದಿಂದ ನಮ್ರನಾಗಿ ತನ್ನ ಸ್ತುತಿಯನ್ನು ಹೀಗೆ ಸಮರ್ಥಿಸಿಕೊಳ್ಳುತ್ತಾನೆ: "ಬ್ರಹ್ಮನೇ ಮೊದಲಾದವರು ನಿನ್ನನ್ನು ಸ್ತುತಿಸಲು ಸಾಧ್ಯವಿಲ್ಲವೆಂದು ಅರಿತಿದ್ದರು. ಆದರೂ ತಮ್ಮ ತಮ್ಮ ಬುದ್ಧಿಗಳಿಗೆ ಅನುಸಾರ ಸ್ತುತಿಸಿದರು. ಆಗೇನೂ ಅವರನ್ನು ಯಾರೂ ನಿಂದಿಸಲಿಲ್ಲ. ಇನ್ನು, ನಿನ್ನ ಮಹಿಮೆಯ ಬಗ್ಗೆ ಏನೂ ಅರಿಯದ ನಾನು ಸ್ತುತಿಸಿದರೆ ಈ ನನ್ನ ಪ್ರಯತ್ನವೂ ಕೂಡ ನಿಂದಾರ್ಹವಾಗದು. ನಿನ್ನನ್ನು ಕುರಿತು ಹೇಳುವಂತಹ ವೇದಗಳೂ ಸಹ ಹೆದರಿಕೊಂಡೇ 'ನೇತಿ, ನೇತಿ' ಎಂಬ ವಿಧಾನದಿಂದ ನಿನ್ನನ್ನು ನಿರ್ದೇಶಿಸುತ್ತವೆ. ನೀನು ಮನಸ್ಸು, ಮಾತುಗಳಿಗೆ ನಿಲುಕದ ಮಹಿಮಾನ್ವಿತನು. ಅನೇಕ ವಿಧದ ಗುಣಗಳನ್ನು ಹೊಂದಿರುವ ನಿನ್ನ ನವನವೀನ ಅವತಾರಗಳು ಭಕ್ತರ ಮನಸ್ಸನ್ನು ಹಿಡಿದಿಟ್ಟುಕೊಂಡಿವೆ. ಸವಿಯಾದ ವೇದವಾಣಿಗಳನ್ನೇ ತನ್ನ ಉಸಿರಿನ ರೂಪದಿಂದ ಸೃಜಿಸಿರುವ ನಿನಗೆ ಬೃಹಸ್ಪತಿಯ ಸ್ತುತಿಯೂ ಕೂಡ ಯಾವ ವಿಸ್ಮಯವನ್ನೂ ಉಂಟುಮಾಡದು. ಹೀಗಾಗಿ, ಹೇ ತ್ರಿಪುರಾಂತಕ, ನಿನ್ನ ಸ್ತುತಿಯ ಮೂಲಕ ನನ್ನ ವಾಣಿಯನ್ನು ಪವಿತ್ರಗೊಳಿಸಿಕೊಳ್ಳುವ ಉದ್ದೇಶದಿಂದಷ್ಟೇ ಈ ಸ್ತೋತ್ರವನ್ನು ನಾನು ರಚಿಸುತ್ತಿದ್ದೇನೆ."

## ತಾತ್ತ್ವಿಕ ಚರ್ಚೆ

ಜಗತ್ತಿನ ಸೃಷ್ಟಿಯ ಬಗ್ಗೆ ಕವಿ ಹೀಗೆ ಹೇಳುತ್ತಾನೆ: "ಈ ಪ್ರಪಂಚವು ಭಗವಂತನಿಂದ ಸೃಷ್ಟಿಸಲ್ಪಟ್ಟಿದೆ. ಅವನು ಅದನ್ನು ಯಾವ ಉದ್ದೇಶದಿಂದ, ಯಾವ ಶರೀರದಿಂದ, ಯಾವ ಉಪಾಯದಿಂದ, ಯಾವ ಆಧಾರದಿಂದ, ಯಾವ ವಸ್ತುಗಳಿಂದ ಸೃಷ್ಟಿಸಿದ್ದಾನೆ ಎಂಬುದಾಗಿ ಮಂದಬುದ್ಧಿಯುಳ್ಳವರು, ಬುದ್ಧಿಗೆ ನಿಲುಕದ ನಿನ್ನ ದಿವ್ಯ ಐಶ್ವರ್ಯವನ್ನು ಕುರಿತು ಕುತರ್ಕಗಳನ್ನು ಮಾಡುತ್ತಾರೆ, ನಿನ್ನ ಅಸ್ತಿತ್ವವನ್ನೇ ಅಲ್ಲಗಳೆಯುತ್ತಿದ್ದಾರೆ. ಅವಯವವುಳ್ಳ ಯಾವುದೇ ವಸ್ತುವಿಗೆ ಆದಿಯಿಲ್ಲದೆ ಇರುವುದಿಲ್ಲ. ಪ್ರತಿಯೊಂದು ಸೃಷ್ಟಿಯ ಹಿಂದೆಯೂ ಒಬ್ಬ ಸೃಷ್ಟಿಕರ್ತನಿರುವುದು ಲೋಕದಲ್ಲಿ ಕಂಡು ಬಂದಿದೆ. ಇನ್ನು ಈ ಜಗತ್ತಿನ ಬಗ್ಗೆ ಹೇಳಬೇಕಾದುದೇನು? ಇಂತಹ ಜಗತ್ತಿನ ಸೃಷ್ಟಿಯನ್ನು ಭಗವಂತನಲ್ಲದೆ ಇನ್ನಾರು ತಾನೇ ಮಾಡಿಯಾರು?"

"ಈ ಜಗತ್ತು ನಿತ್ಯವೆಂದು ಒಬ್ಬರೂ, ಅನಿತ್ಯವೆಂದು ಮತ್ತೊಬ್ಬರೂ, ನಿತ್ಯ ಹಾಗೂ ಅನಿತ್ಯವೆರಡೂ ಆಗಿದೆಯೆಂದು ಇನ್ನೊಬ್ಬರೂ ಬಗೆ ಬಗೆಯಾಗಿ ವಾದ ಮಾಡುತ್ತಾರೆ. ಅವರ ವಿವಿಧ ವಾದಗಳಿಂದ ನನಗೆ ಭ್ರಾಂತಿಯುಂಟಾಗಿದೆ. ಆದ್ದರಿಂದಲೇ, ನಾನು ಯಾವುದೇ ಬಗೆಯ ಪೂರ್ವಾಗ್ರಹವಿಲ್ಲದೆ ಭಗವಂತನನ್ನು ಸ್ತುತಿಸಲು ಸಾಹಸ ಮಾಡುತ್ತಿದ್ದೇನೆ" ಎಂದು ಕವಿ ನಿವೇದಿಸುತ್ತಾನೆ.

## ಭಗವಂತನ ವಿವಿಧ ವಿಭೂತಿಗಳು ಮತ್ತು ಅವನನ್ನು ಪಡೆಯುವ ಮಾರ್ಗಗಳು

ಪುರಾಣಪ್ರಸಿದ್ಧವಾದ ಶಿವನ ರೂಪವನ್ನೂ, ವಿವಿಧ ಲೀಲೆಗಳನ್ನೂ ಕವಿ ಇಲ್ಲಿ ಸುಂದರವಾಗಿ ವರ್ಣಿಸಿದ್ದಾನೆ. ಶಿವನು ವೃಷಭ ವಾಹನ, ವ್ಯಾಘ್ರಚರ್ಮಧರ, ಹಾವುಗಳನ್ನೇ ಆಭರಣಗಳನ್ನಾಗಿ ಧರಿಸಿದ್ದಾನೆ, ಅವನ ಇಡೀ ಶರೀರವು ಭಸ್ಮದಿಂದ ಲೇಪಿತವಾಗಿದೆ, ತನ್ನ ಒಂದು ಕೈಯಲ್ಲಿ ಖಟ್ವಾಂಗವನ್ನೂ (ಒಂದು ರೀತಿಯ ಆಯುಧ) ಇನ್ನೊಂದರಲ್ಲಿ ಕೊಡಲಿಯನ್ನೂ ಆಯುಧಗಳನ್ನಾಗಿ ಧರಿಸಿದ್ದಾನೆ. ಮತ್ತೊಂದರಲ್ಲಿ ಮಾನವನ ತಲೆಬುರುಡೆ ಇದೆ. ಶಿವನಿಗೆ ಇವಿಷ್ಟೆ ಸ್ವತ್ತು. ಆದರೂ ಅವನು ದೇವತೆಗಳಿಗೆ ಸಕಲ ಸಂಪತ್ತನ್ನೂ ಭೋಗ-ಭಾಗ್ಯವನ್ನೂ ಕರುಣಿಸಿದ್ದಾನೆ. ಕವಿ ಹೇಳುತ್ತಾನೆ, "ಯಾರು ಆತ್ಮಾರಾಮನೊ ಅವನಿಗೆ ವಿಷಯವಸ್ತುಗಳು ಮರೀಚಿಕೆಯಂತೆ ನಿಸ್ಸಾರವಾಗಿ ತೋರುತ್ತವೆ".

ಹಿಂದೊಮ್ಮೆ ಬ್ರಹ್ಮ-ವಿಷ್ಣು ಇಬ್ಬರೂ ತಮ್ಮಲ್ಲಿ ಯಾರು ಶ್ರೇಷ್ಠರು ಎಂಬ ವಾದದಲ್ಲಿ ತೊಡಗಿದ್ದರಂತೆ. ಆಗ ಅವರ ಮುಂದೆ ಶಿವನು ಒಂದು ಮಹಾನ್ ಅಗ್ನಿಕಂಭದ ರೂಪದಲ್ಲಿ ಆವಿರ್ಭವಿಸುತ್ತಾನೆ. ಬ್ರಹ್ಮ, ವಿಷ್ಣು – ಇಬ್ಬರೂ ಅದರ ಆದಿ-ಅಂತ್ಯಗಳನ್ನು ಅಳೆಯುವ ಸಲುವಾಗಿ ಆ ಕಂಭದ ಮೇಲಕ್ಕೂ, ಕೆಳಕ್ಕೂ ಎಷ್ಟು ದೂರ ಸಂಚರಿಸಿದಾಗಲೂ ಅದರ ಆದಿ-ಅಂತ್ಯಗಳನ್ನು ತಿಳಿಯಲಾಗಲಿಲ್ಲ. ಆಗ ಶ್ರದ್ಧಾ-ಭಕ್ತಿಗಳಿಂದ ಶಿವನನ್ನು ಸ್ತುತಿಸಿದಾಗ ಭಗವಂತನು ಅವರಿಗೆ ತನ್ನ ನಿಜವಾದ ಸ್ವರೂಪವನ್ನು ತೋರಿಸುತ್ತಾನೆ.

ರಾವಣನು ತನ್ನ ತಲೆಗಳನ್ನೇ ಕತ್ತರಿಸಿ ಕಮಲಗಳಂತೆ ಶಿವನಿಗೆ ಅರ್ಪಿಸಿ, ಮೂರೂ ಲೋಕಗಳ ಮೇಲೆ ವಿಜಯವನ್ನು ಸಾಧಿಸಿದನು. ನಂತರ ಮದದಿಂದ ತನ್ನ ಭುಜಪರಾಕ್ರಮವನ್ನು ಕೈಲಾಸದ ಮೇಲೆ ತೋರಿಸಲು ಬಂದಾಗ, ಶಿವನು ತನ್ನ ಹೆಬ್ಬೆರಳನ್ನು ಒತ್ತುವುದರ ಮೂಲಕ ಅವನಿಗೆ ಪಾತಾಳದಲ್ಲೂ ಸ್ಥಳವಿಲ್ಲದಂತೆ ಮಾಡಿದನು. ಯಶಸ್ಸಿನ ಮದದಿಂದ ಕೊಬ್ಬಿದ ದುಷ್ಟರು ಮೋಹಗೊಳ್ಳುತ್ತಾರೆ. ಹಾಗೆಯೆ, ಮೂರು ಲೋಕಗಳಿಗೆ ಅಧಿಪತಿಯಾದ ಬಾಣಾಸುರನೂ ಶಿವನ ಪಾದಗಳನ್ನು ಪೂಜಿಸುತ್ತ ಇಂದ್ರನನ್ನೂ ನಾಚಿಸುವ ಐಶ್ವರ್ಯಕ್ಕೆ ಒಡೆಯನಾದುದೇನೂ ಆಶ್ಚರ್ಯವೇ ಅಲ್ಲ. ಭಗವಂತನಿಗೆ ತಲೆಬಾಗಿದವರಿಗೆ ಯಾವ ಐಶ್ವರ್ಯವು ತಾನೇ ಪ್ರಾಪ್ತಿಯಾಗದು?

ಸಮುದ್ರಮಥನದ ಸಮಯದಲ್ಲಿ ಮೇಲೆದ್ದ ಹಾಲಾಹಲದಿಂದ ದೇವ-ರಾಕ್ಷಸ ಗಣಗಳನ್ನು ರಕ್ಷಿಸುವ ಸಲುವಾಗಿ ಅದನ್ನೇ ಕುಡಿದು ನೀಲಕಂಠನಾದರೂ, ಅದು ಶಿವನಿಗೆ ಶೋಭೆಯನ್ನೇ ತಂದುಕೊಟ್ಟಿತು. ಅದೇ ರೀತಿ ಯಾರು ಸಂಸಾರಭಯವನ್ನು ಹೋಗಲಾಡಿಸಲೆಂದು ಕಾರ್ಯತತ್ಪರರಾಗುವರೋ, ಅಂತಹ ಮಹಾಪುರುಷರ ಲೋಪ ದೋಷಗಳೆಲ್ಲ ಗುಣಗಳಾಗಿ ಪರಿವರ್ತಿತವಾಗುತ್ತವೆ.

ಯಾರ ಪುಷ್ಪಬಾಣಗಳ ಎದುರು ದೇವ, ರಾಕ್ಷಸ, ಮನುಷ್ಯರೇ ಮೊದಲಾದ ಯಾರೂ ಕೂಡ ನಿಲ್ಲಲಾರದೇ ಹೋದರೊ, ಅಂತಹ ಕಾಮದೇವನು ಶಿವನನ್ನು ಸಾಮಾನ್ಯ ದೇವತೆಯೆಂಬಂತೆ ಕೆಣಕಿ ನಾಶವಾಗಿ ಎಲ್ಲರ ನೆನಪಿನ ವಸ್ತುವಾಗಿದ್ದಾನೆ. ಸಂಯಮಿಗಳಿಗೆ ಅವಮಾನ ಮಾಡುವುದು ಎಷ್ಟು ವಿನಾಶಕರ ಎಂಬುದನ್ನು ಇದು ತೋರಿಸುತ್ತದೆ.

ಜಗತ್ತಿನ ರಕ್ಷಣೆಗಾಗಿ ಶಿವನು ಮಾಡಿದ ನೃತ್ಯ ಜಗತ್ತಿಗೆ ಭಯವನ್ನು ಉಂಟುಮಾಡುವ ಚಿತ್ರಣವನ್ನು ಕವಿ ನೀಡುತ್ತಿದ್ದಾನೆ. ಶಿವನ ಪಾದಾಘಾತಕ್ಕೆ ಸಿಲುಕಿ ಭೂಮಿ ನಾಶವಾದೇನೆಂಬ ಭ್ರಮೆಯಿಂದ ನಡುಗುತ್ತದೆ; ಗಿರಗಿರನೆ ಸುತ್ತುತ್ತಿರುವ ಪರಿಘವೆಂಬ ಆಯುಧಕ್ಕೆ ಸಮನಾದ ಅವನ ಭುಜಗಳ ಹೊಡೆತಕ್ಕೆ ಸಿಕ್ಕಿದ, ತಾರಾಮಂಡಲದಿಂದ

ಶೋಭಿಸುತ್ತಿರುವ ಅಂತರಿಕ್ಷವು ಕ್ಷೋಭೆಗೊಳಗಾಗಿದೆ; ಹಾರಾಡುತ್ತಿರುವ ಅವನ ಜಟೆಯ ಹೊಡೆತಕ್ಕೆ ಸಿಕ್ಕಿ ಸ್ವರ್ಗಲೋಕವು ಘಾಸಿಗೊಂಡಿದೆ. ಇವೆಲ್ಲವೂ ಶಿವನ ವಿರಾಟ್ ಸ್ವರೂಪವನ್ನು ಸೂಚಿಸುತ್ತವೆ.

ತನಗೆ ಹುಲ್ಲುಕಡ್ಡಿಗೆ ಸಮನಾದ ತ್ರಿಪುರವನ್ನು ದಹಿಸಲು ಶಿವನು ಭೂಮಿಯನ್ನು ರಥವನ್ನಾಗಿ, ಬ್ರಹ್ಮನನ್ನೇ ಸಾರಥಿಯಾಗಿ, ಮೇರು ಮಹಾಪರ್ವತವನ್ನೇ ಬಿಲ್ಲಾಗಿ, ಸೂರ್ಯ–ಚಂದ್ರರನ್ನು ತನ್ನ ರಥದ ಚಕ್ರಗಳನ್ನಾಗಿ, ವಿಷ್ಣುವನ್ನೇ ತನ್ನ ಬಾಣವಾಗಿ ಮಾಡಿಕೊಂಡನು. ತನ್ನ ಕಾರ್ಯಕ್ಕೆ ಯಾರ ಸಹಾಯವನ್ನೂ ಬಯಸದ ಶಿವನು ಈ ಮಹಾ ಸಾಧನಗಳನ್ನು ಬಳಸಿದುದು ಕೇವಲ ಲೀಲೆಗಾಗಿ, ಅಷ್ಟೆ.

ಒಮ್ಮೆ ಶಿವನನ್ನು ಸಾವಿರ ಕಮಲಗಳಿಂದ ಪೂಜಿಸಲು ಸಂಕಲ್ಪಿಸಿದ ಹರಿಯು ಒಂದು ಹೂವು ಕಡಿಮೆಯಾದದ್ದನ್ನು ಕಂಡು, ತನ್ನ ಕಮಲದಂತಹ ಕಣ್ಣನ್ನೇ ಕಿತ್ತು ಶಿವನ ಪಾದಕ್ಕೆ ಸಮರ್ಪಿಸಿದನು. ಭಕ್ತಿಯ ಈ ಪರಾಕಾಷ್ಠೆಯಿಂದ ಸುಪ್ರೀತನಾದ ಶಿವನು ಮೂರು ಲೋಕಗಳ ರಕ್ಷಣೆಗಾಗಿ ವಿಷ್ಣುವಿಗೆ ಸುದರ್ಶನ ಚಕ್ರ ವನ್ನು ನೀಡಿದನು.

ಅಧರ್ಮಾಚರಣೆ ಯಾರಿಂದಲೇ ಆಗಲಿ, ಅವನು ಶಿಕ್ಷಾರ್ಹನೇ. ಕಾಮನ ಬಾಣದ ಪ್ರಭಾವದಿಂದ ಬ್ರಹ್ಮನು ತನ್ನ ಮಗಳಾದ ಸಂಧ್ಯೆಯನ್ನು ಕಾಮಿಸುವ ಸಲುವಾಗಿ ಜಿಂಕೆಯ ರೂಪವನ್ನು ತಾಳಿ ಅವಳನ್ನು ಬೆನ್ನಟ್ಟಿದಾಗ, ಶಿವನು ತನ್ನ ಪಿನಾಕವನ್ನು ಹೆದೆಯೇರಿಸಿ ಅದರಿಂದ ಬಾಣವನ್ನು ಬಿಟ್ಟನು. ಅವನ ಅಮೋಘ ಬಾಣಗಳಿಂದ ಪೀಡಿತನಾದ ಬ್ರಹ್ಮನು ಇಂದಿಗೂ ಕೂಡ ಭಯಗ್ರಸ್ತನಾಗಿ ಕಾಣು ತ್ತಿದ್ದಾನೆಂದು ಕವಿ ಹೇಳುತ್ತಾನೆ. ಶಿವನು ಪಾರ್ವತಿಯನ್ನು ತನ್ನ ದೇಹದ ಅರ್ಧಾಂಗಿಯನ್ನಾಗಿ ಮಾಡಿಕೊಂಡದ್ದು ಆತನ ಕೃಪೆಯೇ ಹೊರತು ಅವಳ ಚೆಲುವಿನಿಂದ ಮುಗ್ಧನಾಗಿಲ್ಲವೆಂಬುದು ಅವನು ಕಾಮನನ್ನು ದಹಿಸಿದುದರಿಂದಲೇ ಸಾಬೀತಾಗುತ್ತದೆ. ಇನ್ನು ಒಂದು ವೇಳೆ ಪಾರ್ವತಿಯೂ ಹಾಗೇ ತಿಳಿದಿದ್ದರೆ, ಸಾಮಾನ್ಯ ಹೆಂಗಸರಂತೆ ಇವಳೂ ಮುಗ್ಧಳೆಂದೇ ತಿಳಿಯಬೇಕೆಂದು ಕವಿ ಹೇಳುತ್ತಾನೆ. ಆ ಮೂಲಕ ಶಿವನ **ಪರಮವೈರಾಗ್ಯ ಹಾಗೂ ಭಕ್ತಾನುಗ್ರಹ**– ಇವೆರಡನ್ನೂ ಒಟ್ಟಿಗೆ ನಮ್ಮ ಮುಂದೆ ಪ್ರಸ್ತುತ ಪಡಿಸುತ್ತಾನೆ.

ಶಿವನಿಗೆ ಸ್ಮಶಾನವೇ ಕ್ರೀಡಾಸ್ಥಳ, ಪಿಶಾಚಿಗಳೇ ಸಹಚರರು. ಚಿತೆಯ ಭಸ್ಮದಿಂದ ತನ್ನ ಶರೀರವನ್ನು ಬಳಿದುಕೊಂಡು, ಮಾನವ ತಲೆಬುರುಡೆಗಳನ್ನೇ ಅವನು ಹಾರವಾಗಿ ಧರಿಸಿದ್ದಾನೆ. ಅತ್ಯಂತ ಅಮಂಗಳಕಾರಿಯಾಗಿ ಕಾಣುತ್ತಾನೆ. ಆದರೆ ಯಾರು ಅವನನ್ನು ಸ್ಮರಿಸುವರೊ, ಅವರಿಗೆ ಅತ್ಯಂತ ಮಂಗಳವನ್ನುಂಟುಮಾಡುತ್ತಾನೆ.

ಯಾರು ತಮ್ಮನ್ನು ಬುದ್ಧಿವಂತರೆಂದು ಕರೆದುಕೊಳ್ಳುತ್ತಾರೊ, ಅವರು ಭಗವಂತನಾದ ಶಿವನನ್ನು ಆದಿತ್ಯನೆಂದೂ, ಚಂದ್ರನೆಂದೂ, ಅಗ್ನಿಯೆಂದೂ, ವಾಯುವೆಂದೂ, ಜಲವೆಂದೂ, ಆಕಾಶವೆಂದೂ, ಆತ್ಮನೆಂದೂ ಬಗೆಬಗೆಯಾಗಿ ವರ್ಣಿಸುತ್ತಾರೆ. ಆದರೆ, ಕವಿ ಹೇಳುತ್ತಾನೆ, ಭಗವಂತನಲ್ಲದ ವಸ್ತು ಯಾವುದಾದರೂ ಇದ್ದರೆ ಅದು ನನಗೆ ತಿಳಿಯದು ಎಂದು. ಹೀಗೆ ಜಗತ್ತಿನ ಚರಾಚರ ವಸ್ತುಗಳಲ್ಲೆದರಲ್ಲೂ ಭಗವಂತನ ಸಾನ್ನಿಧ್ಯವಿದೆ ಎಂದು ಕವಿ ಸೂಚಿಸುತ್ತಿದ್ದಾನೆ.

ಮೂರು ವೇದಗಳು (ಋಕ್, ಯಜುಸ್, ಸಾಮ), ಮೂರು ಅವಸ್ಥೆಗಳು (ಜಾಗ್ರತ್, ಸ್ವಪ್ನ, ಸುಷುಪ್ತಿ), ಮೂರು ಲೋಕಗಳು (ಭೂಃ, ಭುವಃ, ಸುವಃ), ಮೂರು ದೇವತೆಗಳು (ಬ್ರಹ್ಮ, ವಿಷ್ಣು,ರುದ್ರ) ಇವುಗಳನ್ನು 'ಓಂ' ಕಾರದಲ್ಲಿ ಅಂತರ್ಗತವಾಗಿರುವ **ಅ, ಉ, ಮ** ಅಕ್ಷರಗಳು ಸೂಚಿಸುತ್ತವೆ. ಇವೆಲ್ಲವೂ ಭಗವಂತನ ಬೇರೆ, ಬೇರೆ ಅಭಿವ್ಯಕ್ತಿಗಳು. ನಾದಾತ್ಮಕವಾದ ಆ 'ಓಂ' ಕಾರವೇ ಭಗವಂತನ ಸಮಷ್ಟಿ ರೂಪ, ಎಲ್ಲ ಬಗೆಯ ನಾಮ–ರೂಪಗಳನ್ನು ಮೀರಿದ ರೂಪ. ಆ ಪರಶಿವನು ಎಲ್ಲಕ್ಕಿಂತಲೂ ಹತ್ತಿರವೂ, ಎಲ್ಲಕ್ಕಿಂತ ದೂರವೂ, ಅಣುವಿಗಿಂತ ಅಣುವೂ, ಮಹತ್ತಿಗಿಂತ ಮಹತ್ತೂ, ಎಲ್ಲಕ್ಕಿಂತಲೂ ಹೊಸತೂ, ಎಲ್ಲಕ್ಕಿಂತಲೂ ಪುರಾತನನೂ ಆಗಿರುತ್ತಾನೆ ಎಂದು ಉಪನಿಷತ್ತುಗಳ ಧಾಟಿಯಲ್ಲಿಯೇ ಕವಿ ಶಿವತತ್ತ್ವವನ್ನು ಬಣ್ಣಿಸುತ್ತಾನೆ. ಶಿವನೇ ರಜೋಗುಣದಿಂದ ಕೂಡಿದವನಾದ ಬ್ರಹ್ಮನಾಗಿ ವಿಶ್ವವನ್ನು ಸೃಷ್ಟಿಸುತ್ತಾನೆ, ತಮೋಗುಣದಿಂದ ಕೂಡಿದ ಹರನಾಗಿ ಪ್ರಲಯಕಾಲದಲ್ಲಿ ಎಲ್ಲವನ್ನೂ ಸಂಹರಿಸುತ್ತಾನೆ, ಸತ್ತ್ವಗುಣದಿಂದ ಕೂಡಿ ಲೋಕಕ್ಕೆ ಸುಖ ನೀಡುವ ವಿಷ್ಣುವಾಗುತ್ತಾನೆ. ಇಷ್ಟಾದರೂ ಅವನು ಮೂರು ಗುಣಗಳಿಗೂ ಅತೀತನು, ಶುದ್ಧಜ್ಞಾನಸ್ವರೂಪನು.

ಇಂತಹ ಭಗವಂತನನ್ನು ಪಡೆಯುವ ಮಾರ್ಗ ಒಂದೆಯೊ ಅಥವಾ ಹಲವಾರು ಇವೆಯೊ ಎಂಬ ಪ್ರಶ್ನೆಗೆ ಕವಿ ಹೀಗೆ ಉತ್ತರಿಸು ತ್ತಾನೆ: "ಹೇಗೆ ಎಲ್ಲ ನದಿಗಳ ಗಮ್ಯಸ್ಥಾನ ಸಾಗರವೇ ಆಗಿದೆಯೋ ಹಾಗೆ ಒಬ್ಬನೇ ಆದ ಭಗವಂತನನ್ನು ಸಾಂಖ್ಯರು, ಪಾತಂಜಲ ಯೋಗಿಗಳು, ಪಾಶುಪತರು, ವೈಷ್ಣವರು ಮುಂತಾದವರು, ಆ ಮಾರ್ಗಗಳು ನೇರವಾಗಿರಲಿ ಇಲ್ಲ ವಕ್ರವಾಗಿರಲಿ, ತಮ್ಮ ತಮ್ಮ ರುಚಿಗೆ ತಕ್ಕಂತೆ ಅನುಸರಿಸುತ್ತ ಆರಾಧಿಸುತ್ತಾರೆ." ಈ ಮಾತಿನಲ್ಲಿ ಎಲ್ಲ ಬಗೆಯ ಧಾರ್ಮಿಕ ಮಾರ್ಗಗಳನ್ನೂ ಸಮಾನವಾಗಿ ಸ್ವೀಕರಿಸುವ ಉದಾರ ಬುದ್ಧಿಯನ್ನು ನಾವು ಕಾಣಬಹುದು.

## ಪಾರವಿಲ್ಲದ ಮಹಿಮೆಯುಳ್ಳವನು

ಸ್ತುತಿನಿರತ ಪುಷ್ಪದಂತನಿಗೆ ಶಿವನ ಮಹಿಮೆಯ ಅಗಾಧತೆಯ ಅನುಭವವಾಗುತ್ತದೆ. ಅದನ್ನು ಈ ಮಾತುಗಳ ಮೂಲಕ ಅವನು ಹೇಳುತ್ತಿದ್ದಾನೆ: "ಹೇ ವರವನ್ನು ಕರುಣಿಸುವವನೇ, ಕ್ಲೇಶಯುಕ್ತ ವಾದ ನನ್ನ ಮನಸ್ಸೆಲ್ಲಿ, ನಿನ್ನ ಅನಂತ ದಿವ್ಯಗುಣಗಳೆಲ್ಲಿ? ನಿನ್ನ ಅನಂತತೆಯಿಂದ ಭೀತನಾಗಿದ್ದರೂ, ನಿನ್ನ ಚರಣಗಳಲ್ಲಿರುವ ಭಕ್ತಿಯಿಂದ ಧೈರ್ಯಗೊಂಡು ಈ ಸ್ತೋತ್ರವನ್ನು ರಚಿಸುತ್ತಿದ್ದೇನೆ."

"ಕಪ್ಪು ಬಣ್ಣದ ಪರ್ವತವನ್ನು ಮಸಿಯನ್ನಾಗಿಯೂ, ಕಲ್ಪತರು ವನ್ನೇ ಲೇಖನಿಯನ್ನಾಗಿಯೂ, ಭೂಮಿಯನ್ನೇ ಬರೆಯುವ ಪತ್ರ ವನ್ನಾಗಿಯೂ ಮಾಡಿಕೊಂಡು, ವಿದ್ಯಾದೇವತೆಯಾದ ಸರಸ್ವತಿಯೇ ನಿನ್ನ ಮಹಿಮೆಯನ್ನು ಕುರಿತು ಅನಂತಕಾಲದವರೆಗೂ ಬರೆದರೂ ಮಂಗಳಕರನಾದ ನಿನ್ನ ಗುಣಗಳ ಕೊನೆ ಕಾಣಸಿಗದು."

ಹಾಗೆಯೇ ಸ್ತೋತ್ರದ ಕೊನೆಯಲ್ಲಿ ಶಿವನಿಗೆ ನಮಸ್ಕರಿಸುವಾಗಲೂ ಕವಿ ತಬ್ಬಿಬ್ಬಾಗುತ್ತಾನೆ. ಅನಂತನಾದ ಭಗವಂತನಿಗೆ ಹೇಗೆ ನಮಸ್ಕಾರ ಮಾಡುವುದೆಂದು ಅವನ ಮನಸ್ಸು ಚಿಂತಿಸುತ್ತದೆ. ಏಕೆಂದರೆ ನಮಸ್ಕರಿಸುವಾಗ ಒಂದು ಹೆಸರನ್ನು ಹಿಡಿದು ನಮಸ್ಕರಿಸುವುದು ರೂಢಿ. ಆದರೆ, ಭಗವಂತನಿಗೆ ಅನಂತ ನಾಮಗಳು. ಒಂದು

ಹೆಸರನ್ನು ಮಾತ್ರ ಉಚ್ಚರಿಸಿ ನಮಸ್ಕರಿಸಿದರೆ ಆತನ ಯಾವುದೊ ಒಂದು ಅಭಿವ್ಯಕ್ತಿಯನ್ನು ಮಾತ್ರ ಹೇಳಿದಂತಾಗಿ ಅವನನ್ನು ಸೀಮಿತ ಗೊಳಿಸಿದ ಅಪರಾಧವಾಗಬಹುದೆಂಬ ಅವ್ಯಕ್ತ ಭಯ ಕವಿಯನ್ನು ಕಾಡುತ್ತದೆ. ಕೊನೆಗೂ, ಕವಿಯ ಅದ್ಭುತ ಸ್ಫೂರ್ತಿಗೆ ಯಾವ ನಮಸ್ಕಾರಕ್ಕೂ ಸಿಕ್ಕದ ಆ ಪರಮಾತ್ಮ ತತ್ತ್ವಕ್ಕೆ ನಮಸ್ಕರಿಸುವ ವಿಶಿಷ್ಟ ವಿಧಾನ ತಿಳಿಯುತ್ತದೆ. ಅವನು ಹೇಳುತ್ತಾನೆ, "ಹೇ ಭಗವಂತ, ನಿನ್ನ ತತ್ತ್ವ ನನಗೆ ಸರಿಯಾಗಿ ತಿಳಿಯುತ್ತಿಲ್ಲ. ಹೀಗಾಗಿ, ನಿನ್ನ ನಿಜ ಸ್ವರೂಪ ಹೇಗಿದೆಯೋ (ಅದು ನಿನಗೆ ಮಾತ್ರ ಗೊತ್ತು), ಅಂತಹ ಸ್ವರೂಪವುಳ್ಳ ನಿನಗೆ ಮತ್ತೆ ಮತ್ತೆ ನಮಸ್ಕಾರ." ಇದರಲ್ಲಿ ಅಹಂಕಾರದ ಸೋಲು, ಆ ಸೋಲಿನ ಪರಿಣಾಮವಾಗಿ ಮಾತ್ರ ಜೀವಿಯು ಪರಮಾತ್ಮ ತತ್ತ್ವವನ್ನು ಅರಿಯಲು ಸಾಧ್ಯವೆಂಬ ಸೂಕ್ಷ್ಮವನ್ನು ಕವಿ ತಿಳಿಸುತ್ತಿದ್ದಾನೆ.

### ಶಿವನ ಶ್ರೇಷ್ಠತೆ ಮತ್ತು ಫಲಶ್ರುತಿ

"ಶಿವನಿಗಿಂತ ಉತ್ತಮರಾದ ದೇವತೆಗಳು ಬೇರಾರೂ ಇಲ್ಲ. ಶಿವಮಹಿಮ್ನಕ್ಕಿಂತ ಮಿಗಿಲಾದ ಸ್ತುತಿ ಇನ್ನೊಂದಿಲ್ಲ. ಶಿವನಾಮಕ್ಕಿಂತ ಪವಿತ್ರವಾದ ಬೇರೆ ಶಬ್ದವೇ ಇಲ್ಲ. ಗುರುವಿನ ತತ್ತ್ವದ ಜ್ಞಾನಕ್ಕಿಂತ ಮಿಗಿಲಾದ ಜ್ಞಾನವಿಲ್ಲ" ಎನ್ನುತ್ತದೆ ಸ್ತೋತ್ರ. ಭಕ್ತನಿಗೆ ಅಥವಾ ಉಪಾಸಕನಿಗೆ ಇಷ್ಟನಿಷ್ಠೆ ಬಹಳ ಮುಖ್ಯ. ಅದಿಲ್ಲದಿದ್ದರೆ ಉಪಾಸಕನು ತಾನು ಆರಂಭಿಸಿದ ಉಪಾಸನೆಯನ್ನು ಮಧ್ಯದಲ್ಲಿಯೆ ಕೈಬಿಟ್ಟು ಬೇರೆ ದೇವತೆಯ ಉಪಾಸನೆಯನ್ನು ಮಾಡಲಾರಂಭಿಸುತ್ತಾನೆ. ನಂತರ ಅದನ್ನೂ ಬಿಟ್ಟು ಇನ್ನೊಂದು ದೇವತೆಯ ಮೊರೆಹೋಗುತ್ತಾನೆ. ಒಂದು ದೇವತೆಯನ್ನು ಹಿಡಿದುಕೊಂಡು, ಅವನಲ್ಲಿ ಪರಮಶ್ರದ್ಧೆ ಯನ್ನಿಟ್ಟು ಸಾಧನೆಯನ್ನು ಮಾಡಿದರೆ ಫಲ ಶೀಘ್ರವಾಗಿ ಕೈಗೂಡು ವುದರಲ್ಲಿ ಸಂಶಯವಿಲ್ಲ. ಸಾಧಕನ ಮನಸ್ಸಿನಲ್ಲಿ ದೇವತೆಯ ಕುರಿತಾದ ಶ್ರದ್ಧೆ-ಭಕ್ತಿ ಜಾಗ್ರತವಾಗಬೇಕಾದರೆ ಅವನಿಗೆ ತನ್ನ ಆಯ್ಕೆ ಅತ್ಯುತ್ತಮವಾದದ್ದು ಹಾಗೂ ಅಮೋಘವಾದದ್ದೆಂಬ ವಿಶ್ವಾಸ ಉಂಟಾಗಬೇಕು. ಅದಕ್ಕಾಗಿಯೇ ಪುರಾಣಗಳು, ಸ್ತೋತ್ರಗಳು ಮುಂತಾದವುಗಳಲ್ಲಿ ಯಾವುದೊ ಒಂದು ದೇವತೆಯನ್ನು ಉಳಿದೆಲ್ಲ ದೇವತೆಗಳಿಗಿಂತ ಶ್ರೇಷ್ಠ ಎಂದು ಹೊಗಳುತ್ತಾರೆ. ಇದು ಆಯಾ ದೇವತೆಯ ಭಕ್ತನಲ್ಲಿ ಭಕ್ತಿಯ ಸ್ಥಿರತೆಯು ಉಂಟಾಗಲೆಂಬ ಉದ್ದೇಶದಿಂದ ಮಾತ್ರ ಮಾಡಿದ್ದೇ ಹೊರತು, ಉಳಿದ ದೇವತೆಗಳನ್ನು ತಿರಸ್ಕಾರ ಮಾಡಲೆಂದೇನೂ ಅಲ್ಲ. ಇದನ್ನು ಎಲ್ಲ ಭಕ್ತರೂ ಮನದಟ್ಟು ಮಾಡಿಕೊಳ್ಳಬೇಕು.

ಶ್ರೀರಾಮಕೃಷ್ಣರು ಈ ಶಿವಮಹಿಮ್ನ ಸ್ತೋತ್ರವನ್ನು ಕೇಳುತ್ತ ಕೇಳುತ್ತ ಸಮಾಧಿ ಸ್ಥಿತಿಗೆ ಹೋಗುತ್ತಿದ್ದರು. ಈ ಸ್ತೋತ್ರವನ್ನು ಕೇವಲ ಕಾವ್ಯವೆಂಬ ದೃಷ್ಟಿಯಿಂದ ಓದುವ ಮನಸ್ಸೂ ಕೂಡ ಸಂತೋಷವನ್ನು ಅನುಭವಿಸದೆ ಇರದು. ಇನ್ನು ಭಕ್ತಿ ತುಂಬಿದ ಹೃದಯಕ್ಕೆ ಇದರ ಕೇವಲ ಪಠನವೇ ಆನಂದವನ್ನೂ, ಭಗವಂತನಲ್ಲಿ ಇನ್ನಷ್ಟು ಪ್ರೀತಿಯನ್ನೂ ಉಂಟುಮಾಡುವುದೆಂಬ ವಿಷಯದಲ್ಲಿ ಸಂಶಯವೇ ಇಲ್ಲ. ಭಗವಂತನ ವೇದೋಕ್ತ, ಪುರಾಣೋಕ್ತ ಮಹಿಮೆಯನ್ನು ವಿಸ್ತಾರವಾಗಿ ಹೇಳಿ, ಕಡೆಗೆ ಅವನ ತತ್ತ್ವವು ಇಂತಹದ್ದೆಂದು ಹೇಳಲಾಗದು, ಅದು ಅವಾಙ್ಮಾನಸಗೋಚರ ಎನ್ನುವ ಉಪನಿಷತ್ತಿನ ಭಾಷೆಯಲ್ಲಿ ಪರ್ಯವಸಾನಗೊಳ್ಳುವ ಇದರ ಪರಿ ಮನೋಹರವಾಗಿದೆ. ಹೀಗೆ ತಾತ್ತ್ವಿಕದೃಷ್ಟಿಯಿಂದಲೂ, ಭಕ್ತಿಸಾಧನವಾಗಿಯೂ ಶಿವಮಹಿಮ್ನವು ಒಂದು ಶ್ರೀಮಂತವಾದ ಸ್ತೋತ್ರವೆನ್ನಲಡ್ಡಿಯಿಲ್ಲ.

## ಭಗವಂತನ ಅಮಲು

ಒಂದು ಸಲ ಗುರುಗೋವಿಂದ ಸಿಂಹರ ಹತ್ತಿರ ಕೆಲವು ಶಿಷ್ಯರು ಬಂದು ಕೇಳಿದರು: "ಗುರುದೇವಾ, ನಾವು ಪ್ರತಿದಿನವೂ ನಿಮ್ಮ ವಾಣಿಯನ್ನು ನಿಯಮಿತವಾಗಿ ಕೇಳುತ್ತಿದ್ದೇವೆ. ಹಾಗೂ ನಿಮ್ಮ ನಿರ್ದೇಶನದಂತೆ ಜಪವನ್ನು ಮಾಡುತ್ತಿದ್ದೇವೆ. ಆದರೆ ಇದುವರೆಗೆ ನಮಗೆ ಅದರ ಫಲ ಸ್ವಲ್ಪವೂ ಲಭಿಸಿಲ್ಲ. ಏಕೆ ಹೀಗಾಗುತ್ತಿದೆ?" ಗೋವಿಂದ ಸಿಂಹರು ಶಿಷ್ಯರ ಮಾತು ಕೇಳಿ ಮುಗುಳ್ನಕ್ಕರು. ಸಮೀಪದಲ್ಲಿದ್ದ ಒಬ್ಬ ಶಿಷ್ಯನಿಗೆ ಹೀಗೆ ಹೇಳಿದರು: "ಹೋಗು, ಒಂದು ಪಾತ್ರೆಯ ತುಂಬ ಸಾರಾಯಿಯನ್ನು ತುಂಬಿಕೊಂಡು ಬಾ." ಶಿಷ್ಯರಿಗೆಲ್ಲ ತಬ್ಬಿಬ್ಬಾಯಿತು. ಗುರುಗಳು ಏಕೆ ಈ ತರಹ ಹೇಳುತ್ತಿದ್ದಾರೆಂದು ತಿಳಿಯಲಿಲ್ಲ. ಆ ಶಿಷ್ಯ ಏನೂ ತಿಳಿಯದೆ ಸುಮ್ಮನೆ ನಿಂತಿದ್ದ. ಗುರು ಗೋವಿಂದ ಸಿಂಹರು ಮತ್ತೆ ಹೇಳಿದರು, "ಹೋಗು, ತಮ್ಮಾ, ನಾನು ಹೇಗೆ ಹೇಳಿದೆನೋ ಹಾಗೆ ಮಾಡು." ಶಿಷ್ಯನು ಇಷ್ಟವಿಲ್ಲದಿದ್ದರೂ, ಒಂದು ಪಾತ್ರೆಯಲ್ಲಿ ಸಾರಾಯಿಯನ್ನು ತೆಗೆದುಕೊಂಡು ಬಂದ. ಆಗ ಗುರುಗಳು ಪ್ರಶ್ನೆ ಕೇಳಿದ ಶಿಷ್ಯನನ್ನು ಕುರಿತು ಹೇಳಿದರು: "ಸಾರಾಯಿ ಖಾಲಿಯಾಗುವವರೆಗೂ ಅದರಲ್ಲಿ ಬಾಯಿ ಮುಕ್ಕಳಿಸು." ಶಿಷ್ಯನು ಹಾಗೆಯೇ ಮಾಡಿದನು. ಗುರುಗಳು ಕೇಳಿದರು, "ಏನು, ಇನ್ನೂ ನಿನಗೆ ಪ್ರಜ್ಞೆ ಇದೆಯೇ? ಸ್ವಲ್ಪವಾದರೂ ಮದ್ಯದ ಅಮಲು ಏರಲಿಲ್ಲವೇ?" ಶಿಷ್ಯ ಉತ್ತರಿಸಿದ, "ನೀವು ಬರೀ ಬಾಯಿ ಮುಕ್ಕಳಿಸಲು ಹೇಳಿದಿರಿ. ಅಮಲು ಹೇಗೆ ತಾನೇ ಬರುತ್ತದೆ?" ಆಗ ಗೋವಿಂದ ಸಿಂಹರು ಹೇಳಿದರು, "ನೀನು ಸರಿಯಾಗಿ ಹೇಳಿದೆ. ಜಪ, ಭಜನೆ, ಪವಿತ್ರ ಗುರುವಾಣಿಗಳ ಉಚ್ಚರಣೆ – ಇವು ಕೂಡ ಹಾಗೆಯೇ. ಇವನ್ನು ನೀನು ಕೇವಲ ಬಾಯಿಯಿಂದ ಮುಕ್ಕಳಿಸುತ್ತಿದ್ದೀಯೆ (ಉಚ್ಚರಿಸುತ್ತಿರುವೆ). ಅವುಗಳನ್ನು ಬಾಯಿಯ ಮೂಲಕ ಹೊರಕ್ಕೆ ಹಾಕುತ್ತಿದ್ದೀಯೇ ಹೊರತು, ಅದರ ಭಾವವನ್ನು ನೀನು ಅಂತರ್ಗತ ಮಾಡಿಕೊಂಡಿಲ್ಲ. ಜಪ-ತಪ-ಭಜನೆ ಮುಂತಾದವುಗಳನ್ನು ಅಂತಃಕರಣಪೂರ್ವಕವಾಗಿ ಮಾಡಬೇಕು; ಶ್ರದ್ಧೆ, ಪ್ರೇಮ ಮತ್ತು ನಿಷ್ಕಾಮಭಾವನೆಯಿಂದ ಮಾಡಬೇಕು. ಎಂದು ನೀನು ಜಪತಪಾದಿಗಳಲ್ಲಿ ಸಂಪೂರ್ಣ ಮನಸ್ಸನ್ನು ತೊಡಗಿಸಿಕೊಳ್ಳುತ್ತೀಯೋ, ಆಗ ಮಾತ್ರ ಅದರ ಪರಿಣಾಮ ತಿಳಿಯುತ್ತದೆ."

**(ಮೂಲ: ಡಾ. ಶರತ್‌ಚಂದ್ರ ಪೆಂಡಾರಕರ, ಅನುವಾದ: ಸ್ವಾಮಿ ಶಾಂತಿನಾಥಾನಂದ)**